''ಪರಾಧೀನವಾದುದೆಲ್ಲ ದುಃಖ, ಮತ್ತು ಸ್ವ-ಅಧೀನವಾದುದೆಲ್ಲ ಸುಖ. ಸಂಕ್ಷಿಪ್ತವಾಗಿ ಇದೇ ಸುಖದುಃಖಗಳ ಲಕ್ಷಣ.''

ಈ ದೃಷ್ಟಿಯಿಂದ ನೋಡಿದಾಗ ನಾವು ಯಾವುದನ್ನು ಸುಖವೆಂದು ಕರೆಯುತ್ತೇವೆಯೋ ಅದು ನಿಜವಾಗಿಯೂ ದುಃಖವೇ. ಏಕೆಂದರೆ ಈ ಸಾಮಾನ್ಯ ಸುಖದಲ್ಲಿ ನಾವು ಇಂದ್ರಿಯ, ಮನಸ್ಸು ಮತ್ತು ವಿಷಯಗಳಿಗೆ ವಶರಾಗಿರುತ್ತೇವೆ. ವಿಷಯೇಂದ್ರಿಯಗಳ ಸಂಸ್ಪರ್ಶದಿಂದ ಈ ಸುಖ ಉಂಟಾಗುತ್ತದೆ, ಮತ್ತು ಇದನ್ನು ಭೋಗ ಎಂದು ಕರೆಯಲಾಗಿದೆ. ಶ್ರೀಕೃಷ್ಣನು ಐದನೆಯ ಅಧ್ಯಾಯದಲ್ಲಿ ಹೇಳುತ್ತಾನೆ:

**ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ॥**

ಸಂಸ್ಪರ್ಶದಿಂದ ಉಂಟಾಗುವ ಭೋಗಗಳೆಲ್ಲವೂ ದುಃಖಕ್ಕೆ ಕಾರಣವಾಗುತ್ತವೆ. ಇಂತಹ ಸುಖವನ್ನೇ ರಾಜಸಿಕ ಸುಖವೆಂದು ಕರೆಯುವುದು. ಇದು ಮೊದಲು ಅನುಭವಿಸುವಾಗ ಅಮೃತಪ್ರಾಯವಾಗಿರುತ್ತದೆ. ಆದರೆ ಮುಂದೆ ವಿಷವಾಗಿ ಪರಿಣಮಿಸುತ್ತದೆ. ಇದಕ್ಕೆ ಉದಾಹರಣೆಗಳು ಅನೇಕ, ಮತ್ತು ಇದು ಎಲ್ಲರಿಗೂ ತಿಳಿದಿರುವ ವಿಷಯವೇ.

ನಿದ್ರೆ, ಆಲಸ್ಯ ಮತ್ತು ಪ್ರಮಾದ – ಇವುಗಳಿಂದ ಉಂಟಾಗುವ ಸುಖ ತಾಮಸಿಕವಾದುದು. ನಿದ್ರೆ ಆವಶ್ಯಕವಾದರೂ ಅತಿ ನಿದ್ರೆ ಮನುಷ್ಯನಿಗೆ ಒಂದು ಶಾಪ. ಇದರಿಂದ ವ್ಯಕ್ತಿಗೆ ಜಡಸ್ವಭಾವ ಬಂದುಬಿಡುತ್ತದೆ. ನಿದ್ರೆ, ವಿಶೇಷವಾಗಿ ಸುಷುಪ್ತಿ, ಮನಸ್ಸಿಗೆ ತುಂಬ ಆನಂದ ತೃಪ್ತಿಯನ್ನು ನೀಡುತ್ತದೆ. ಎಲ್ಲ ಪ್ರಾಪಂಚಿಕ ಸುಖವಿರುವವನೂ ಕೂಡ ಅದನ್ನೆಲ್ಲ ಮರೆತು ನಿದ್ರಿಸಲು ಬಯಸುತ್ತಾನೆ. ಆದರೆ ಆಧ್ಯಾತ್ಮಿಕ ಸಾಧಕರು, ಸಾಧನೆಯಲ್ಲಿಯೇ ಪರಮಸುಖವನ್ನು ಕಾಣುವವರು, ನಿದ್ರಾಸುಖವನ್ನು ಅಷ್ಟು ಅಪೇಕ್ಷಿಸುವುದಿಲ್ಲ; ಅವರು ಸಾಧನೆಯಲ್ಲಿಯೇ ಸಾತ್ತ್ವಿಕ ಸುಖವನ್ನು ಅನುಭವಿಸುತ್ತಿರುತ್ತಾರೆ.

ಆಲಸ್ಯವೆಂದರೆ ಏನೂ ಕೆಲಸ ಮಾಡದೇ ಇರುವುದಲ್ಲ; ರಚನಾತ್ಮಕವಾಗಿಯೂ ಸೃಜನಾತ್ಮಕವಾಗಿಯೂ ಕಾಲಯಾಪನೆ ಮಾಡದಿರುವುದು ಆಲಸ್ಯ. ಅನೇಕರು ದಿನವೆಲ್ಲ ಬ್ಯುಸಿಯಾಗಿರುತ್ತಾರೆ, ಆದರೆ ಗಮನಾರ್ಹವಾದುದೇನನ್ನೂ ಸಾಧಿಸಿರುವುದಿಲ್ಲ. ಕೇವಲ ಬ್ಯುಸಿಯಾಗಿರುವುದೂ ಒಂದು ಬಗೆಯ ಆಲಸ್ಯವೇ. ಅನೇಕರಲ್ಲಿ ದೈಹಿಕ ಆಲಸ್ಯವಿಲ್ಲದಿದ್ದರೂ ಬೌದ್ಧಿಕ ಆಲಸ್ಯವಿರುತ್ತದೆ. ಆಳವಾದ ಚಿಂತನೆ ಮಾಡಿ ಏನಾದರೂ ಬರೆಯಬೇಕು ಅಥವಾ ಉಪನ್ಯಾಸ ಮಾಡಬೇಕು ಎಂದರೆ ಮನಸ್ಸು ಕೇಳುವುದಿಲ್ಲ. ಆದರೆ ಈ ಆಲಸ್ಯವು ವೈರಾಗ್ಯದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇನ್ನು ಕೆಲವರಿಗೆ ಭಾವನಾತ್ಮಕ ಆಲಸ್ಯವಿರುತ್ತದೆ. ಇತರರ ಕಷ್ಟಸುಖಗಳಿಗೆ ಅವರು ಸ್ಪಂದಿಸಲಾರರು, ಯಾವುದೇ ಸೌಂದರ್ಯವನ್ನೂ ಸವಿಯಲಾರರು, ಯಾವುದೂ ಅವರ ಭಾವವನ್ನು ಕೆರಳಿಸಲಾರದು. ಉದ್ವೇಗವೂ ಇಲ್ಲ, ಉದ್ಯೋಗವೂ ಇಲ್ಲ, ಯಾವುದರಲ್ಲಿಯೂ ಉತ್ಸಾಹವೂ ಇಲ್ಲ – ಇಂತಹ ಸ್ಥಿತಿಯಲ್ಲಿಯೇ ಅವರು ಸುಖವನ್ನು ಕಾಣುತ್ತಾರೆ.

ಪ್ರಮಾದವೆಂದರೆ ಕೆಲಸ ಮುಂತಾದವುಗಳಲ್ಲಿ ಅಸಡ್ಡೆ. ಒಂದು ಕೆಲಸವನ್ನು ಚೆನ್ನಾಗಿ ಮಾಡಿ ಮುಗಿಸಿದಾಗ ಒಂದು ರೀತಿಯ ಸುಖ ಸಿಗುತ್ತದೆ, ತೃಪ್ತಿ ಲಭಿಸುತ್ತದೆ. ಆದರೆ ಅಂತಹ ಸೂಕ್ಷ್ಮ ಸುಖ ಅಥವಾ ತೃಪ್ತಿಯನ್ನು ಪರಿಭಾವಿಸುವ ಸಾಮರ್ಥ್ಯ, ತಾಮಸಿಕರಿಗೆ ಇರುವುದಿಲ್ಲ. ಅವರು ಕೆಲಸವನ್ನು ತಪ್ಪಿಸಿಕೊಳ್ಳುವುದರಲ್ಲಿಯೂ, ಕೊಟ್ಟ ಕೆಲಸವನ್ನು ಅರೆಮನಸ್ಸಿನಿಂದ ಮಾಡುವುದರಲ್ಲಿಯೂ ಸುಖವನ್ನು ಕಾಣುತ್ತಾರೆ. 'ಅಬ್ಬ , ಒಂದು ಕೆಲಸ ತಪ್ಪಿತು' ಎಂದು ಸಂತೋಷಪಡುತ್ತಾರೆ.

ಹೀಗೆ ಗುಣತ್ರಯ ವಿಭಾಗ ಮಾಡಿ ಈ ಕೆಳಗಿನ ಶ್ಲೋಕದ ಮೂಲಕ ಶ್ರೀಕೃಷ್ಣನು ವಿಷಯವನ್ನು ಸಮಾಪ್ತಿಗೊಳಿಸುತ್ತಾನೆ:

**ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।**
**ಸತ್ತ್ವಂ ಪ್ರಕೃತಿಜೈರ್ಯುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥**

''ಈ ಪೃಥಿವಿಯಲ್ಲಾಗಲಿ ದೇವಲೋಕದ ದೇವತೆಗಳಲ್ಲಾಗಲಿ ಪ್ರಕೃತಿಯಿಂದುಂಟಾದ ಈ ಮೂರು ಗುಣಗಳಿಂದ ಮುಕ್ತರಾದವರು ಯಾರೂ ಇಲ್ಲ.''

## ರಘುನಾಥದಾಸರು

ರಘುನಾಥದಾಸರು ಇಂಗ್ಲಿಷರ ಕೆಳಗೆ ಸೈನ್ಯದಲ್ಲಿದ್ದರು. ಗಡಿರಕ್ಷಣೆಯಲ್ಲಿ ಪಹರೆಯವರಾಗಿದ್ದಾಗ ಒಳ್ಳೆಯವರಾಗಿ ಕಾರ್ಯತತ್ಪರರಾಗಿದ್ದರು. ಒಂದು ರಾತ್ರಿ ಅವರು ರಾಮಭಜನೆ ಕೇಳಿದರು. ತಮ್ಮ ಕಾರ್ಯದಲ್ಲಿ ಎಂದಿನಂತೆ ಕಾರ್ಯತತ್ಪರರಾಗಲು ಯತ್ನಿಸಿದರು. ಆದರೆ 'ಜಯ ಬೋಲೋ ರಾಮಚಂದ್ರ ಕೀ ಜೈ' ಎಂಬ ನಾಮ ಅವರನ್ನು ಹುಚ್ಚರನ್ನಾಗಿ ಮಾಡಿತು. ಅವರು ತಮ್ಮ ಆಯುಧ, ಸಮವಸ್ತ್ರ ಎಲ್ಲವನ್ನೂ ಆಚೆಗೆ ಎಸೆದು ಭಜನೆಯಲ್ಲಿ ಸೇರಿದರು.

ಹೀಗೆಯೇ ಕೆಲವು ದಿನಗಳು ಕಳೆದವು. ಮೇಲಿನ ಅಧಿಕಾರಿಗಳಿಗೆ ವಿಷಯ ಗೊತ್ತಾಗಿ, ''ಇದು ನಿಜವೆ? ಇದಕ್ಕೆ ಏನು ಶಿಕ್ಷೆ ಗೊತ್ತೆ?'' ಎಂದು ರಘುನಾಥದಾಸರನ್ನು ಕೇಳಿದರು. ''ಗೊತ್ತು, ಇದಕ್ಕೆ ಗುಂಡಿನ ಏಟು ಶಿಕ್ಷೆ'' ಎಂದರು ಅವರು. ಅಂದು ರಾತ್ರಿಯೂ ಅವರು ರಾಮಭಜನೆ ಕೇಳಿದರು. ಎಷ್ಟು ಪ್ರಯತ್ನಪಟ್ಟರೂ ಭಜನೆಗೆ ಹೋಗದಿರಲು ಸಾಧ್ಯವಾಗಲಿಲ್ಲ. ಮೇಲಿನ ಅಧಿಕಾರಿಗಳಿಗೆ ವಿಷಯ ಗೊತ್ತಾಯಿತು. ಅವರಿಗೆ ನಂಬಿಕೆ ಬಾರದೆ, ತಾವೇ ಪರೀಕ್ಷಿಸಲು ಗಡಿಯ ಹತ್ತಿರ ಹೋದರು. ಆಗ ರಘುನಾಥದಾಸ್ ಅಲ್ಲಿಯೇ ಇದ್ದರು.

ಮರುದಿನ ಬೆಳಿಗ್ಗೆ ರಘುನಾಥದಾಸರು ತನ್ನ ಆಯುಧವನ್ನು ಅಧಿಕಾರಿಗಳಿಗೆ ಒಪ್ಪಿಸಿದರು. ಅಧಿಕಾರಿಗಳು ಅದಕ್ಕೊಪ್ಪಲಿಲ್ಲ. ಕಾರಣ, ಅವರು ಗಡಿಯಲ್ಲಿ ಅವರನ್ನು ನೋಡಿದ್ದರು. ರಘುನಾಥದಾಸರಿಗೆ ಆಶ್ಚರ್ಯವಾಯಿತು. ''ಶ್ರೀರಾಮನು ತನ್ನ ದಾಸನಿಗೆ ಇದನ್ನು ಮಾಡಿದನು. ಆದ್ದರಿಂದ ಇಂದಿನಿಂದ ರಾಮನನ್ನಲ್ಲದೆ ಮತ್ತಾರ ಸೇವೆಯನ್ನೂ ಮಾಡಲಾರೆ'' ಎಂದರು.

ಅನಂತರ ಅವರು ಸರಸ್ವತೀ ನದೀತೀರದಲ್ಲಿ ಬೈರಾಗಿಯಾದರು.

*(ಸೋದರಿ ನಿವೇದಿತಾ, '**ನಾ ಕಂಡಂತೆ ನನ್ನ ಗುರುದೇವ**', ಪು.೧೨೮-೨೯, ಮೈಸೂರು ಶ್ರೀರಾಮಕೃಷ್ಣ ಆಶ್ರಮ ಪ್ರಕಟಣೆ)*

# ಪಂಚಕೇದಾರ ಯಾತ್ರೆ

ಸ್ವಾಮಿ ಜ್ಞಾನಯೋಗಾನಂದ




## ಭಾಗ ೩ : ತುಂಗನಾಥ

**ಮ**ರುದಿನ ಬೆಳಗ್ಗೆ ೫.೧೫ ಕ್ಕೆ ಎದ್ದು ಮುಖ ತೊಳೆದು, ರಾಂಸಿಯಿಂದ ಹೊರಟೆವು. ನಮ್ಮ ಪ್ರಧಾನ ಬ್ಯಾಗುಗಳನ್ನು ಗುಡಕನ್ ಧಾರಾ ಎಂಬಲ್ಲಿ, ಒಂದು ಹೋಟೆಲ್-ಅಂಗಡಿಯಲ್ಲಿ ಬಿಟ್ಟಿದ್ದೆವು. ಅಲ್ಲಿಗೆ ನಾವು ತಲುಪುವಾಗ ೬ ಗಂಟೆ ದಾಟಿತ್ತು. ಆರು-ಆರೂಕಾಲು ಗಂಟೆಗೆ ಅಲ್ಲಿಂದ ಜೀಪ್ ಹೊರಡುವುದಾಗಿ ಹಿಂದಿನ ದಿನ ಬೀರೇಂದ್ರ ಸಿಂಹ ತಿಳಿಸಿದ್ದ. ಅಲ್ಲಿ ಜೀಪ್ ನಿಂತಿದ್ದರೂ, ಜನ ತುಂಬುವವರೆಗೆ ಅದು ಹೊರಡಲಿಲ್ಲ. ೬.೪೦ಕ್ಕೆ ಜೀಪ್ ಹೊರಟಿತು. ಮತ್ತೆ ಜೀಪ್ ನದಿಯ ದಂಡೆಯಲ್ಲಿ , ಬೆಟ್ಟದ ಸೆರಗಿನಲ್ಲಿ ಸಾಗುತ್ತ ಊಖೀಮಠವನ್ನು ತಲುಪಿತು. ಅಲ್ಲಿ ಹಿಂದೆ ಹೋಗಿದ್ದ ಅದೇ ಹೋಟೆಲ್ 'ದೇವಭೂಮಿ'ಗೆ ಹೋಗಿ ತಿಂಡಿ, ಚಹಾ ಮುಗಿಸಿದೆವು.

ಅಲ್ಲಿಂದ 'ಚೋಪ್ತಾ' ಎನ್ನುವ ಸ್ಥಳಕ್ಕೆ ಹೊಗಬೇಕು, ಅದೇ ತುಂಗನಾಥಕ್ಕೆ ಹೋಗಲು ತಲುಪಬೇಕಾದ ಮೊದಲ ಸ್ಥಳ. ಆದರೆ ಅಲ್ಲಿಗೆ ಹೋಗಲು ಸುಲಭವಾಗಿ ಗಾಡಿ ಸಿಗಲಿಲ್ಲ. ಸ್ವಲ್ಪ ಹೊತ್ತು ಕಾಯಬೇಕಾಯಿತು. ಆದರೆ 'ಹೋಟೆಲ್ ದೇವಭೂಮಿ'ಯವನ ಗೆಳೆಯ ಡ್ರೈವರ್ ಒಬ್ಬ ಚೋಪ್ತಾಗೆ ಹೋಗುತ್ತಿದ್ದ - ಅವನ ಗಾಡಿಯಲ್ಲಿ ಹೋಗುವ ವ್ಯವಸ್ಥೆ ಮಾಡಿದ. ಕೊನೆಗೂ ಜೀಪ್ ದೊರಕಿತು.

ಚೋಪ್ತಾ ತಲುಪಿದೆವು. ಅದೊಂದು ಮುಖ್ಯ ಸ್ಥಳ ಎನ್ನಬೇಕು. ಪಂಚಕೇದಾರ ದೇಗುಲಗಳಲ್ಲಿ ಕೇದಾರನಾಥವನ್ನು ಬಿಟ್ಟರೆ ತುಂಗನಾಥವೇ ಪ್ರಸಿದ್ಧ ಸ್ಥಳ. ಅಲ್ಲಿಗೆ ಹೆಚ್ಚು ಯಾತ್ರಿಕರು ಬರುತ್ತಾರೆ. ಅದು ತುಂಬ ಎತ್ತರವಾದ ಸ್ಥಳವಾದರೂ, ಮುಖ್ಯರಸ್ತೆಯಿಂದ ಹೆಚ್ಚು ದೂರವಿಲ್ಲ. ಏಳು ಕಿಲೋಮೀಟರ್ ನಡೆದರೆ ಸಾಕು. ಆದರೆ ರಸ್ತೆ ಮಾತ್ರ ಕಡಿದು. ಚೋಪ್ತಾದಲ್ಲಿ ಸಾಕಷ್ಟು ಅಂಗಡಿಗಳಿವೆ, ಹೋಟೆಲುಗಳಿವೆ. ಕೇದಾರದಿಂದ ಬದರಿಗೆ ಹೋಗುವ ಒಂದು ಪ್ರಮುಖ ರಸ್ತೆ ಇದು. ಹಾಗಾಗಿ ಅಲ್ಲಿಗೆ ಹೋಗುವ ವಾಹನಗಳೆಲ್ಲ (ಮುಖ್ಯವಾಗಿ ಕಾರು, ಜೀಪ್, ವ್ಯಾನ್ ಇತ್ಯಾದಿಗಳು. ಈ ಮಾರ್ಗವಾಗಿ ಸರ್ವಿಸ್ ಬಸ್ ಇಲ್ಲವೇ ಇಲ್ಲ ಅನ್ನಬಹುದು - ದಿನಕ್ಕೆ ಒಂದೇ ಬಸ್ ಆಗ ಇತ್ತು) ಚೋಪ್ತಾದಲ್ಲಿ ನಿಂತು ಯಾತ್ರಿಕರು ತಿಂಡಿ ತೀರ್ಥ ತೆಗೆದುಕೊಳ್ಳುವುದನ್ನು ಕಾಣಬಹುದಾಗಿತ್ತು. ನಮಗೆ ನಮ್ಮ ಬ್ಯಾಗ್‌ಗಳನ್ನೆಲ್ಲ ಒಂದು ಅಂಗಡಿಯಲ್ಲಿ ಇಡಬೇಕಾಗಿತ್ತು. ಯಾತ್ರಿಕರು ಬಂದು ಹೋಗುವ ಇಂಥ ಜಾಗದಲ್ಲಿ ಇದೆಲ್ಲ ಸಾಮಾನ್ಯ. ಹೋಟೆಲೊಂದರಲ್ಲಿ ವಿಚಾರಿಸಿದೆವು, 'ನಮ್ಮ ಬ್ಯಾಗ್ ಇಲ್ಲಿ ಇಡಬಹುದೆ?' ಹೋಟೆಲಿನ ಮಾಲೀಕ ಜಾಗ ಮಾಡಿಕೊಟ್ಟ. ಅಲ್ಲೇ ನಾವು ಚಹಾ ಕುಡಿದು, ಲಾರಿಯೊಂದಿಗೆ ತುಂಗನಾಥದತ್ತ ಹೊರಟೆವು.







## ೧. ಏದುಸಿರಿನ ನಡಿಗೆ

ಮುಖ್ಯರಸ್ತೆಯಿಂದ ಒಂದೆಡೆ ತುಂಗನಾಥಕ್ಕೆ ಹೋಗುವ ದಾರಿ ಕಾಣಿಸುತ್ತಿದೆ. ಅಲ್ಲಿ ಸಾಕಷ್ಟು ಮಂದಿ ಯಾತ್ರಿಕರು ವಿವಿಧ ಹೋಟೆಲು, ಅಂಗಡಿಗಳಲ್ಲಿ ನೆರೆದಿದ್ದುದು ಕಾಣಿಸಿತು. ಒಂದೆಡೆ ಉಚಿತ ಶೌಚಾಲಯ ಕಾಣಿಸಿತು. ನಡಿಗೆ ಆರಂಭಿಸುವ ಮುನ್ನ ಅಲ್ಲಿಗೆ ಹೋಗಿ ದೇಹಬಾಧೆಯನ್ನು ತೀರಿಸಿಕೊಂಡೆವು. ಸುಮಾರು ೧೦.೨೦ ಕ್ಕೆ ನಮ್ಮ ನಡಿಗೆ ಆರಂಭವಾಯಿತು. ತುಂಗನಾಥಕ್ಕೆ ಸುಂದರವಾದ ಡಾಂಬರಿನ ರಸ್ತೆಯಿದೆ. ಅಗಲವಾದ ರಸ್ತೆಯ ಇಕ್ಕೆಲಗಳಲ್ಲೂ ಪೈನ್, ದೇವದಾರು ವೃಕ್ಷಗಳು ನಿಂತಿವೆ. ರಸ್ತೆ ಬದಿಯಲ್ಲಿ ಅಲ್ಲಲ್ಲಿ ಕುಳಿತುಕೊಳ್ಳಲು ಕಟ್ಟೆಗಳಿವೆ. ಪರ್ವತದ ಮೇಲಕ್ಕೆ ಏರುತ್ತ ಹೋದಂತೆ ಮರಗಳು ಕಡಿಮೆಯಾಗಿ, ಬರೀ ಪೊದರುಗಳು ಕಾಣಿಸ ತೊಡಗಿದವು. ಒಂದೇ ಸಲಕ್ಕೆ ಕಡಿದಾದ ಹಾದಿಯಲ್ಲಿ ರಸ್ತೆ ಸಾಗತೊಡಗಿತು. ತುಂಗನಾಥ ಬೆಟ್ಟದ ತುದಿ ಕಾಣಿಸಿತು – ಅದೋ ಬೋಳು ಬೆಟ್ಟ! ಹಸಿರು ಹಾಸಿದಂತೆ, ಮರಗಳಿಲ್ಲದೆ ಬರೀ ಹುಲ್ಲಿನಿಂದ ತುಂಬಿದ ಬೆಟ್ಟ. ಏದುಸಿರು ಬಿಡುತ್ತಾ ಬೆಟ್ಟವೇರತೊಡಗಿದವು. ಮೇಲೇರುತ್ತ ಹೋದಂತೆ ತುಂಗನಾಥ ಪರ್ವತದ ಸುತ್ತಮುತ್ತಣ ಪರ್ವತಗಳೆಲ್ಲ ಕಾಣಿಸತೊಡಗಿದವು. ಸುತ್ತ ಕಣಿವೆಗಳು, ಬೆಟ್ಟಗಳಾಚೆ ಬೆಟ್ಟಗಳು, ಮೇಲಕ್ಕೆ ಹಿಮಾವೃತ ಶಿಖರಗಳು – ಇವೆಲ್ಲವನ್ನು ನೋಡುತ್ತಿದ್ದರೆ, ಅದ್ಭುತರಮ್ಯ ಪರಿಸರದಲ್ಲಿ ನಾವಿದ್ದೇವೆ ಅನ್ನಿಸತೊಡಗಿತು. ತಣ್ಣಗೆ ಮೈಕೊರೆಯುವ ಚಳಿ ನಮ್ಮನ್ನಾವರಿಸತೊಡಗಿತು. ಚೋಪ್ತಾದಲ್ಲಿ ಅಷ್ಟೇನೂ ಚಳಿಯಿರಲಿಲ್ಲ. ಆದರೂ ಒಂದು ಸ್ವೆಟರ್ ಧರಿಸಿದ್ದೆವು. ಈಗ ಪರ್ವತವೇರುವ ಆಯಾಸ, ಬೆವರಿನಿಂದ ಸ್ವೆಟರನ್ನು ಕಳಚಿ ಚೀಲದಲ್ಲಿಟ್ಟುಕೊಳ್ಳಬೇಕಾಯಿತು.

ಬೆಟ್ಟವೇರುತ್ತಿದ್ದಂತೆ ಇಬ್ಬರು ಬಂಗಾಳಿಗಳು ಸಿಕ್ಕಿದರು. ನಮ್ಮನ್ನು ನೋಡಿದೊಡನೆ ಅವರು ರಾಮಕೃಷ್ಣ ಮಿಷನ್ನಿನ ಸ್ವಾಮೀಜಿ ಎಂದು ಗುರುತಿಸಿದರು. ಅವರಲ್ಲಿ ಒಬ್ಬ ಹೇಳಿದ, ''ತುಂಗನಾಥದಿಂದ ಒಂದೂವರೆ ಕಿ.ಮೀ. ಮೇಲಕ್ಕೆ ನಡೆದರೆ 'ಚಂದ್ರಶಿಲಾ' ಎನ್ನುವ ಶಿಖರವಿದೆ, ಅಲ್ಲಿಂದ ಸೂರ್ಯೋದಯ ನೋಡಬೇಕು. ಅದಕ್ಕೆ ಬೆಳಗ್ಗೆ ನಾಲ್ಕು ಗಂಟೆಗೇ ಎದ್ದು ಹೊರಡಬೇಕು'' ಎಂದು. ''ಅಷ್ಟು ಹೊತ್ತಿಗೇ ಎದ್ದು ನೀವು ಹೋಗುತ್ತೀರಾ?'' ಎಂದು ನಾವು ಕೇಳಿದ್ದಕ್ಕೆ ''ಹೌದು, ಇಲ್ಲಿಗೆ ಬಂದಮೇಲೆ ಚಂದ್ರಶಿಲಾ ನೋಡಲೇಬೇಕು, ನಾನು ಹೋಗಿಯೇ ಹೋಗುತ್ತೇನೆ'' ಎಂದ. ಇಳಿವಯಸ್ಸಿನಲ್ಲೂ ಅವನ ಉತ್ಸಾಹ ಜೋರಾಗಿತ್ತು.



ಚೋಪ್ತಾದಿಂದ ತುಂಗನಾಥದ ಕಡೆಗೆ

ಇನೇನು ತುಂಗನಾಥ ಹತ್ತಿರವಾಯಿತು, ದೂರದಲ್ಲಿ ದೇವಸ್ಥಾನ ಕಾಣಿಸಿಬಿಟ್ಟಿತು ಎನ್ನುವಷ್ಟರಲ್ಲಿ ನಮ್ಮ ಆಯಾಸ, ಕಾಲುನೋವು ಹೇಳತೀರದು. ಒಂದೆಡೆ ಕುಳಿತು ವಿಶ್ರಮಿಸಿಕೊಂಡೆವು. ಮತ್ತೆ ನಡೆಯುತ್ತಾ ಸಾಗಬೇಕಾದರೆ, ಆಯಾಸದಿಂದ ಕಾಲು ಬರುತ್ತಿಲ್ಲ. ''ಇನ್ನು ಹೆಚ್ಚೇನಿಲ್ಲ, ಒಂದರ್ಧ ಗಂಟೆ ನಡೆದರೆ ನಾವು ಅಲ್ಲಿರುತ್ತೇವೆ'' ಎಂದರು ಕರುಣಾಕರಾನಂದರು. ಅಲ್ಲಿಗೆ ತಲುಪುವ ಉತ್ಸಾಹದಿಂದ ಇಕ್ಕೆಲದ ಸುಂದರ ದೃಶ್ಯಗಳನ್ನು ನೋಡುತ್ತಾ ಹೆಜ್ಜೆ ಹಾಕತೊಡಗಿದೆವು.

ಅದೋ ತುಂಗನಾಥ! ಹತ್ತಿರವಾಯಿತು, ಹತ್ತಿರದಲ್ಲೇ ಭಾರತದ ಅತ್ಯುನ್ನತ ಪ್ರದೇಶದಲ್ಲಿರುವ ತುಂಗನಾಥ ಮಂದಿರವನ್ನು ನೋಡಿದೆವು. ಚಿಕ್ಕದಾದರೂ ಆ ಕಲ್ಲಿನ ಮಂದಿರದ ಸೌಂದರ್ಯ ಅನುಪಮವಾದದ್ದು. ಹಚ್ಚಹಸುರಿನ ಪರ್ವತದ ಹಿನ್ನೆಲೆಯಲ್ಲಿ ಕಲ್ಲಿನ ಮಂದಿರ ತುಂಬ ಸುಂದರವಾಗಿ ಕಾಣಿಸುತ್ತದೆ. ಭಕ್ತರಿಂದ ದೂರವಿರೋಣವೆಂದು ಇಷ್ಟೊಂದು ಎತ್ತರದಲ್ಲಿ ಬಂದು ಕುಳಿತ ತುಂಗನಾಥನಿಗೆ ದೂರದಿಂದಲೇ 'ನಮೋ' ಎಂದು ನಮಸ್ಕರಿಸಿ ನಡಿಗೆ ಮುಂದುವರೆಸಿದೆವು. ಈಗ ರಸ್ತೆ ಮುಗಿದು ಮೆಟ್ಟಿಲುಗಳು ಆರಂಭವಾಗಿದ್ದವು. ಒಂದೊಂದು ಮೆಟ್ಟಿಲನ್ನು ಏರುವುದೂ ಕಠಿಣವೆನಿಸುತ್ತಿತ್ತು. ಅಂತೂ ಸುಮಾರು ೧೨ ಗಂಟೆಯ ಹೊತ್ತಿಗೆ ತಣ್ಣಗೆ ಮೈಕೊರೆಯುವ ಚಳಿಯಲ್ಲಿ ತುಂಗನಾಥ ಮಂದಿರದ ಮುಂದೆ ನಾವಿದ್ದೆವು.

## ೨. ತುಂಗನಾಥದ ಚಳಿ, ಮಳೆ, ಬಿಸಿಲು

ತುಂಗನಾಥ ಮಂದಿರದಲ್ಲಿ ಸಾಕಷ್ಟು ಮಂದಿ ಭಕ್ತರು ನಮಸ್ಕಾರ ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದರು. ನಾವು ಬೇಗನೆ ರಾತ್ರಿ ತಂಗಲು ಬಾಡಿಗೆ ಕೋಣೆ ಹುಡುಕಬೇಕಾಗಿತ್ತು. ಹಾಗಾಗಿ ಬೇಗನೇ ತುಂಗನಾಥನ ದರ್ಶನ ಮಾಡಿ ಬರಬೇಕೆಂದು ದೇವಾಲಯದ ಒಳಹೊಕ್ಕೆವು. ತುಂಗನಾಥನ ದರ್ಶನದಿಂದ ಪುನೀತರಾಗಿ, ''ಇಷ್ಟು ಕಷ್ಟಪಟ್ಟು ಪರ್ವತವೇರಿ ಬಂದವರಿಗೆ ನಿನ್ನ ದರ್ಶನದಿಂದ ಶಾಂತಿ, ಸಮಾಧಾನ ಸಿಗುತ್ತದೆ. ದಯವಿಟ್ಟು ಕೃಪೆ ಮಾಡು ಪ್ರಭೋ'' ಎಂದು ನಮಸ್ಕರಿಸಿದೆವು. ಅಲ್ಲಿ ಸುತ್ತಮುತ್ತಲ ಪ್ರದೇಶಗಳನ್ನು ನೋಡಿ, 'ಉಳಿದುಕೊಳ್ಳುವ ಕೋಣೆಗಳು ಎಲ್ಲಿ ಸಿಗುತ್ತವೆ?' ಎಂದು ಅಲ್ಲಿ ಕೆಲವರನ್ನು ವಿಚಾರಿಸಿದೆವು. ಒಬ್ಬಾತ ಅಲ್ಲೇ ಒಂದೆಡೆ ಇದ್ದ ಹೊಸ ಕಟ್ಟಡವೊಂದನ್ನು ತೋರಿಸಿದ – ಅಲ್ಲಿಗೆ ಹೋಗಿ ನೋಡಿದರೆ, ಅದು ಸುಸಜ್ಜಿತವಾದ ಒಂದು ಹೊಸ ಲಾಡ್ಜ್. ತುಂಗನಾಥ ಪರ್ವತದ ತುದಿ ಭಾಗದಲ್ಲಿ ಒಳ್ಳೆಯ view -point ಇರುವಲ್ಲಿ ಅದನ್ನು ಕಟ್ಟಿದ್ದಾರೆ. 'ಅಲ್ಲಿರುವುದೆ? ಬಾಡಿಗೆ ಎಷ್ಟು ಹೇಳುತ್ತಾನೊ!' ಎಂದು ಹಿಂಜರಿಕೆಯಿಂದ ಅಲ್ಲೇ ನಿಂತಿದ್ದ ಒಬ್ಬನ್ನನ್ನು ಕೇಳಿದೆವು – 'ರೂಂ ಸಿಗುತ್ತದೆಯೆ?' 'ಸಿಗುತ್ತದೆ' ಎಂದ ಆತ. ಒಂದು ಕೋಣೆಗೆ ೫೦೦

ರೂ ಬಾಡಿಗೆ ಎಂದ. ತುಸು ಹೆಚ್ಚಾಯಿತು ಅನ್ನಿಸಿತಾದರೂ ಬೇರೆ ಕಡೆಗೆ ಹೋಲಿಸಿದಾಗ ಕೋಣೆ, ಸೌಕರ್ಯಗಳು ಚೆನ್ನಾಗಿದ್ದವು. ಹಾಗಾಗಿ ಅಲ್ಲೇ ತಂಗಲು ನಿರ್ಧರಿಸಿದೆವು. ಅನಂತರ ಗೊತ್ತಾಯಿತು, ಆ ಲಾಡ್ಜ್ ಅನ್ನು ಆಗತಾನೇ ಕಟ್ಟಲಾಗಿತ್ತು, ಇನ್ನೂ ನಿರ್ಮಾಣದ ಕೆಲಸಗಳು ಮುಗಿದಿಲ್ಲ ಎಂದು.

ಎಂಥ ಚಳಿ ಅವರಿಸಿ ಬಿಟ್ಟಿತ್ತೆಂದರೆ, ಉಸಿರಾಡುವುದೂ ಕಷ್ಟ ವಾಗಿತ್ತು. ಮೆಲ್ಲಗೆ ಮೋಡಗಳು ಮುಸುಕತೊಡಗಿದ್ದವು. ಮಳೆ ಬೀಳ ತೊಡಗಿತೆಂದರೆ ಹೊರಗೆ ಓಡಾಡುವುದು ಕಷ್ಟ. ಅದಕ್ಕೆ ಮೊದಲೇ ಊಟ ಮುಗಿಸಿಬಿಡೋಣವೆಂದು ಹೋಟೆಲಿನವನನ್ನು, 'ಊಟಕ್ಕೆ ವ್ಯವಸ್ಥೆ ಏನು?' ಎಂದು ಕೇಳಿದೆವು. ಅದಕ್ಕೆ ಅವನು ತುಸು ದೂರ ದಲ್ಲಿದ್ದ ಗುಡಿಸಿಲಿನಂಥ ಒಂದು ಹೋಟೆಲಿನಲ್ಲಿದ್ದ ಒಬ್ಬ ಹುಡುಗನನ್ನು ಕೂಗಿ ಕರೆದು, 'ಇಬ್ಬರಿಗೆ ಊಟ ತೆಗೆದುಕೊಂಡು ಬಾ' ಎಂದ. ನಾವು ಕಾದೆವು. ಅರ್ಧಗಂಟೆಯಾಯಿತು, ಒಂದು ಗಂಟೆಯಾಯಿತು. ಊಟದ ಪತ್ತೆಯಿಲ್ಲ; ಊಟಕ್ಕೆ ಹೇಳಿದ ಹೋಟೆಲಿನವನ ಸುಳಿವೂ ಇಲ್ಲ. ಹೋಗಲಿ, ನಾವೇ ಹೋಟೆಲಿಗೆ ಹೋಗುವುದುದೆಂದು ಹೊರಟುನಿಂತೆವು. ಹೊರಗೆ ಕಾಲಿಟ್ಟು ನಡೆಯುವುದೂ ಕಷ್ಟವೆನಿಸುತ್ತಿತ್ತು. ಇರುವ ಸ್ವೆಟರ್, ಶಾಲು ಎಲ್ಲ ವನ್ನೂ ಹೊದ್ದುಕೊಂಡಿದ್ದೆವಾದರೂ, ಚಳಿ ನುಗ್ಗಿ ಬರುತ್ತಿತ್ತು. ಸಣ್ಣಗೆ ತುಂತುರು ಮಳೆ ಬೇರೆ ಶುರುವಾಗಿತ್ತು. ಆದರೂ ಊಟಮಾಡದೆ ವಿಧಿಯಿಲ್ಲ! ಹೇಗೋ ವೇಗವಾಗಿ ನಡೆಯುತ್ತ ಗುಡಿಸಿಲಿನಂಥ ಹೋಟೆಲ್ ತಲುಪಿದೆವು. ಅಲ್ಲಿ ನಾಲ್ಕೈದು ಜನ ಬೆಂಚಿನಲ್ಲಿ ಕುಳಿತು ಊಟ ಮಾಡುತ್ತಿದ್ದರು. ನಾವು ಅಲ್ಲಿಗೆ ಹೋಗಿ, ''ಎಲ್ಲಯ್ಯ, ಊಟ? ಲಾಡ್ಜಿನವನು ಆರ್ಡರ್ ಕೊಟ್ಟು ಎಷ್ಟು ಹೊತ್ತಾಯಿತು?'' ಎಂದು ದಬಾಯಿಸಿದೆವು. ಹೋಟೆಲಿನವನು ವಿನಯದಿಂದ, ''ತಡ ವಾಗುತ್ತಿದೆ ಮಹಾರಾಜ್. ತುಂಬಾ ಜನರಿದ್ದಾರೆ ಬೇರೆ. ಬೇಗನೇ ಮಾಡಿಕೊಡುತ್ತೇನೆ'' ಎಂದು ಕೈಮುಗಿದು ಹೇಳಿದಾಗ ನಾವು ಮೆತ್ತ ಗಾದೆವು. ಹಾಗೂ ಹೀಗೂ ಸೀಮೆಎಣ್ಣೆ ಸ್ಟೌವ್‌ಗೆ ಪಂಪ್ ಹೊಡೆದು, ಬೆಂಕಿ ಉರಿಸಿ ಚಪಾತಿ ಮಾಡಿಕೊಟ್ಟ. ಅವಸರ ಅವಸರವಾಗಿ ಊಟಮಾಡಿ, ಲಾಡ್ಜಿಗೆ ಹಿಂದಿರುಗಿದೆವು. ಆಗ ಮಳೆ ಜೋರಾಗು ತ್ತಿತ್ತು. ಮಳೆ ಬೀಳ ತೊಡಗಿದಾಗ ಸುತ್ತಣ ದೃಶ್ಯಗಳೆಲ್ಲ ಮಾಯವಾಗಿ ಬರೀ ಮೋಡ, ಮಂಜು ಇವಷ್ಟೇ ಕವಿದು ಏನೂ ಕಾಣಿಸದಾಯಿತು. ನಮ್ಮ ಕೋಣೆಗೆ ನುಗ್ಗಿ, ಬಾಗಿಲು ಭದ್ರಪಡಿಸಿ, ಬಾತ್‌ರೂಂಗೆ ಹೋಗಿ ದೇಹಬಾಧೆ ತೀರಿಸಿಕೊಂಡು ಬಂದೆವು. ಮಂಚದಲ್ಲಿ ಕಂಬಳಿ ಹಾಸಿ, ದಪ್ಪನೆಯ ಅರೆಹಾಸಿಗೆ (quilt) ಹೊದ್ದು ಮಲಗಿಬಿಟ್ಟೆವು. ಅಷ್ಟೇ ನಮಗೆ ಗೊತ್ತಾದದ್ದು. ಬೆಚ್ಚನೆ ಮಲಗಿಬಿಟ್ಟವರಿಗೆ ದಣಿವೂ, ಚಳಿಯ ವಾತಾವರಣವೂ ಸೇರಿ ಗಾಢವಾದ ನಿದ್ರೆ ಹತ್ತಿಬಿಟ್ಟಿತು.

ನಿದ್ದೆ ಬಿಟ್ಟು ಎಚ್ಚೆತ್ತಾಗ ಸಂಜೆ ಮೂರೂವರೆ ಗಂಟೆಯಾಗಿತ್ತು. ಮಳೆ ನಿಂತಿತ್ತು. ಆದರೆ ಮೋಡ, ತಣ್ಣನೆಯ ಗಾಳಿ ಇನ್ನೂ ಜೋರಾ ಗಿತ್ತು. ನಡುನಡುವೆ ಬಿಸಿಲು ಬಂದು ಹೋಗುತ್ತಿತ್ತು. ಕೈಕಾಲು ಮೈ ಅಲುಗಾಡಿಸಲೂ ಸಾಧ್ಯವಾಗದಷ್ಟು ಚಳಿ ಹೆಪ್ಪುಗಟ್ಟಿತ್ತು. ಮೈಗೆ ಹೊದ್ದುಕೊಂಡಿದ್ದ ಅರೆಹಾಸಿಗೆಯ ಮುಸುಕನ್ನು ಸ್ವಲ್ಪವೇ ಸ್ವಲ್ಪ ಸರಿಸಿ, ಮುಖ ಹೊರಹಾಕಿದಾಗ ಅಸಾಧ್ಯ ಚಳಿ ಮೈಯತ್ತ ರಾಚು ತ್ತಿತ್ತು. ಆದರೂ ಹೆಚ್ಚುಹೊತ್ತು ಮಲಗಿರಲಾರದೆ, ಎದ್ದು ಕುಳಿತಾಗ ಸ್ವಾಮಿ ಕರುಣಾಕರಾನಂದರು ಎಚ್ಚೆತ್ತಿದ್ದರು. ಆದರೆ ಮಲಗಿಯೇ ಇದ್ದರು. ತಡೆಯಲಾರದ ಚಳಿಗೆ ಅವರು ನಸುನಕ್ಕರು. ''ಹೇಗಿದೆ ಚಳಿ?'' ಎಂದು ಕೇಳಿದೆ. ಅವರು ಉತ್ತರಿಸದೆ ಮಲಗಿದಲ್ಲಿಂದಲೇ ಜೋರಾಗಿ ನಕ್ಕರು. ನಾನು ಎದ್ದುಹೋಗಿ ಬಚ್ಚಲಮನೆಯಲ್ಲಿ ಮುಖ ತೊಳೆಯಲೆಂದು ಬೇಸಿನ್‌ನ ಟ್ಯಾಪ್ ತಿರುಗಿಸಿದರೆ ಕೈಗೆ ಬಿದ್ದ ನೀರು ಮಂಜುಗಡ್ಡೆಯೇ ನೀರಾಗಿ ಸುರಿದಂತೆ ಅನ್ನಿಸಿ, ಕೈ ಹಿಂದ ಕ್ಕೆಳೆದುಕೊಂಡೆ. ಅಷ್ಟರಲ್ಲಿ ಪಕ್ಕದಲ್ಲಿದ್ದ ಇನ್ನೊಂದು ಟ್ಯಾಪ್ ತಿರುಗಿಸಿ ದಾಗ, ಅದರಲ್ಲಿ ಬಿಸಿನೀರು ಬಂತು. ಬದುಕಿದೆ ಎಂದು ಕೈಕಾಲು ಮುಖ ತೊಳೆದುಕೊಂಡೆ. ಭರ್ಜರಿ ಸ್ವೆಟರ್, ಜರ್ಕಿನ್, ಶಾಲು ಇವನ್ನೆಲ್ಲ ಧರಿಸಿಕೊಂಡು ನಮ್ಮ ಕೋಣೆಯ ಹೊರಬಂದೆ.

ಅದೆಂಥ ದೃಶ್ಯ! ದೂರದಲ್ಲಿ ಸಾಲುಸಾಲಾಗಿ ಕಾಣಿಸುತ್ತಿದೆ ಬಂಗಾರ ವರ್ಣದಿಂದ ಥಳಥಳಿಸುತ್ತಿರುವ ಪರ್ವತಮಾಲೆ! ಸಂಜೆಯ ಬಿಸಿಲು ಪಶ್ಚಿಮದಿಂದ ಓರೆಯಾಗಿ ಎತ್ತರೆತ್ತರದ ಪರ್ವತ ಗಳ ಮೇಲೆ, ಅದರಲ್ಲೂ ಹಿಮಾಚ್ಛಾದಿತ ಶಿಖರಗಳ ಮೇಲೆ ಬಿದ್ದಾಗ ಅದೆಂಥ ಸುಂದರ ದೃಶ್ಯ ಅಲ್ಲಿ ನಿರ್ಮಾಣವಾಗುತ್ತಿತ್ತು! ತಡೆಯ ಲಾಗದ ಚಳಿಯಿದ್ದರೂ ಕೋಣೆಯಿಂದ ಹೊರಬಂದೆ – ನಿಜ ವಾಗಿಯೂ ನಾವಿದ್ದ ಲಾಡ್ಜ್ , ಪರ್ವತವೊಂದರ ತುತ್ತತುದಿಯ ಲ್ಲಿತ್ತು. ಅಲ್ಲಿ ಸುತ್ತಮುತ್ತಲ ಪರ್ವತಗಳೆಲ್ಲವೂ ಚೆನ್ನಾಗಿ ಕಾಣಿಸು ತ್ತಿದ್ದವು. ತುಸು ಮುಂದಕ್ಕೆ ಹೋಗಿ ನೋಡಿದೆ, ಅದೊಂದು ಬುಗ್ಯಾಲ್ ಎನ್ನಬಹುದು. ಪರ್ವತದ ತುದಿಗಿರುವ ಖಾಲಿ ಜಾಗ; ಹಸುರು ಹುಲ್ಲು ಮಾತ್ರ ಎಲ್ಲೆಡೆ ಹಬ್ಬಿದೆ. ಅಲ್ಲಲ್ಲಿ ಕೆಲವೊಂದು ಕಲ್ಲುಬಂಡೆಗಳಿವೆ. ಎಡಭಾಗದತ್ತ ಬಂದು ನೋಡಿದೆ, ಅಲ್ಲೊಂದು ಕಲ್ಲುಬಂಡೆ ಉದ್ದಕ್ಕೂ ಚಾಚಿತ್ತು. ಅದನ್ನೇರಿ, ಕಲ್ಲುಬಂಡೆಯ ಅಂಚಿಗೆ ಬಂದೆ – ದೂರದ ಪರ್ವತಗಳನ್ನು ಚೆನ್ನಾಗಿ ನೋಡೋಣ ವೆಂದು.

ಅಬ್ಬಾ! ಅದೇನು ಪ್ರಪಾತ! ಸುಮಾರು ಸಾವಿರ ಮೀಟರ್ ಗಳಿಗೂ ಆಳವಾದ ಕಂದಕ ಕಾಣಿಸಿತು. ನೇರವಾಗಿ ನಾನಿದ್ದ ಬಂಡೆಯ ಕೆಳಭಾಗದಲ್ಲಿ ಭೂಭಾಗವಿರಲಿಲ್ಲ ; ಪರ್ವತಭಾಗ ಹಿಂದಕ್ಕೆ ಹೋದಂ ತಿತ್ತು. ಕಾಲು ಜಾರಿ ಬಿದ್ದರೆ ಎಲಬುಪುಡಿ ಕೂಡ ಸಿಗಲಾರದು. ಅಷ್ಟು ಕಡಿದಾದ ಕಣಿವೆ. ಆಳದಲ್ಲಿ ದೂರಕ್ಕೆ ಇನ್ನೊಂದು ಪರ್ವತದ ಶಿಖರ ಕಾಣಿಸಿತು. ಅಲ್ಲೊಂದು ಬುಗ್ಯಾಲ್, ಸುತ್ತಮುತ್ತ ಕಾಡು ಪ್ರದೇಶ. ಅದೆಂಥಾ ಅದ್ಭುತ ದೃಶ್ಯವೆಂದರೆ, ಇಂಥ ಒಂದು ಪ್ರದೇಶವಿದೆ




ಅದೆಂಥ ಪ್ರಪಾತ...!

ಎಂದು ಊಹಿಸುವುದೂ ಸಾಧ್ಯವಿರುತ್ತಿರಲಿಲ್ಲ. ಈ ಕ್ಷಣದಲ್ಲಿ ಸ್ವಾಮಿ ಕರುಣಾಕರಾನಂದರನ್ನು ಕರೆಯೋಣವೆನಿಸಿತು. ಆದರೆ ಅವರೇ ಅಷ್ಟು ಹೊತ್ತಿಗೆ ಕೋಣೆಯಿಂದ ಹೊರಬಂದು, ನಾನಿದ್ದಲ್ಲಿಗೆ ಬರುತ್ತಿದ್ದರು. ನಾನು ಕಂಡ ಅದ್ಭುತ ದೃಶ್ಯಗಳನ್ನು ಅವರಿಗೆ ತೋರಿಸಿದೆ. ಅವರು ಅದನ್ನು ಮೈಮರೆತು ನೋಡುತ್ತಿರಬೇಕಾದರೆ, ದೊಡ್ಡದೊಂದು ದುಬಾರಿ ಕ್ಯಾಮರಾವನ್ನು ಕೊರಳಿಗೆ ಹಾಕಿಕೊಂಡಿದ್ದ ಯುವಕನೊಬ್ಬ ನಮ್ಮ ಬಳಿಗೆ ಬಂದು ನಮ್ಮ ಚಿತ್ರ ತೆಗೆಯತೊಡಗಿದ. ''ಏ ನಿಲ್ಲಪ್ಪಾ, ನಿಲ್ಲು; ಚಿತ್ರ ತೆಗೆಯಬೇಡ'' ಎನ್ನುವಷ್ಟರಲ್ಲಿ ಅವನು ಕ್ಯಾಮರಾ ಕ್ಲಿಕ್ಕಿಸಿಯೇ ಬಿಟ್ಟ. ಅನಂತರ ಅವನು ಬಂಗಾಳಿಯಲ್ಲಿ, ''ಪ್ರೊಣಾಮ್ ಮಹಾರಾಜ್'' ಎಂದ.

ಅವನು ಯಾವುದೋ ಒಂದು ಅಮೆರಿಕನ್ ಯೂನಿವರ್ಸಿಟಿಯಲ್ಲಿ ತುಂಗನಾಥ ಪರಿಸರದ ಕಾಡಿನಲ್ಲಿಯ ಅಳಿಲುಗಳ ವರ್ತನೆ ಕುರಿತು ಪಿಹೆಚ್.ಡಿ. ಪದವಿಗಾಗಿ ಅಧ್ಯಯನ ಮಾಡುತ್ತಿದ್ದಾನಂತೆ. ಭಾರತದ ಒಂದು ಇಕಾಲಜಿ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುತ್ತಲೂ ಇದ್ದಾನಂತೆ. ಒಂದು ವಾರದಿಂದ ತಾನು ಇಲ್ಲೆಲ್ಲಾ ಓಡಾಡುತ್ತಿರುವುದಾಗಿ ತಿಳಿಸಿದ. ಇಲ್ಲಿ ವಾಸ ಮಾಡುತ್ತಿದ್ದೀಯಾ ಎಂದು ಕೇಳಿದ್ದಕ್ಕೆ ಆತ, ತಾನು ಕೆಳಗಡೆ (ಚೋಪ್ತಾ-ಮಂಡಲ್ ಪ್ರದೇಶದ) ಯಾವುದೋ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ತನ್ನ ತಾಯಿಯೊಂದಿಗೆ ಅಲ್ಲಿರುವುದಾಗಿ ತಿಳಿಸಿದ. ಬೇಲೂರು ಮಠದ ಬಗ್ಗೆ ತನಗೆ ಗೊತ್ತಿದ್ದದ್ದು, ಅಲ್ಲಿನ ಸ್ವಾಮಿಗಳ ಪರಿಚಯ ಇತ್ಯಾದಿಯಾಗಿ ಏನೇನೋ ಹರಟುತ್ತ ಸಾಕಷ್ಟು ಬೇಜಾರು ಬರಿಸಿದ. ಕೊನೆಗೆ ಅವನು ನಮ್ಮೊಂದಿಗೆ ಬಂಡೆಯ ತುದಿಯಲ್ಲಿ ನಿಂತು, ಸಾವಿರ ಮೀಟರ್‌ಗಳಷ್ಟು ಆಳದ ಪರ್ವತಾಗ್ರದಲ್ಲಿ ಮೇಯುತ್ತಿದ್ದ ಹಿಮಾಲಯನ್ ಥಾರ್ (ನೋಡುವುದಕ್ಕೆ ಜಿಂಕೆಯಂತಿರುತ್ತದೆ) ಗಳನ್ನು ಗುರುತಿಸಿದ. ಸ್ವಚ್ಛಂದವಾಗಿ ಮೇಯುತ್ತಿದ್ದ ಅವುಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದ. ತುಂಗನಾಥಕ್ಕಿಂತಲೂ ಎತ್ತರದಲ್ಲಿರುವ, ಸುಮಾರು ೪೦೦೦ ಮೀಟರ್ ಎತ್ತರದಲ್ಲಿರುವ 'ಚಂದ್ರಶಿಲಾ' ಎಂಬ ಪರ್ವತದತ್ತ ತೋರಿಸಿ, ಅಲ್ಲಿಂದ ಬೆಳಿಗ್ಗೆ ಸೂರ್ಯೋದಯ ನೋಡುವುದು ತುಂಬಾ ಚೆನ್ನಾಗಿರುತ್ತದೆ ಎಂದ. ನಾವು ಆಗಲೇ ಮರುದಿನ ಬೆಳಗ್ಗೆ ೪ ಗಂಟೆಗೆ ಎದ್ದು ಅಲ್ಲಿಗೆ ಹೋಗಬೇಕೆಂದಿರುವ ವಿಚಾರವನ್ನು ಅವನಿಗೆ ತಿಳಿಸಿದೆವು.

ಸಾಯಂಕಾಲ ಚಹಾ ಕುಡಿಯಲು ತುಸು ತಗ್ಗಿನಲ್ಲಿರುವ ಹೋಟೆಲಿಗೆ ಹೋದೆವು. ಅದೇ ಮಧ್ಯಾಹ್ನ ತಡವಾಗಿ ಊಟ ಮಾಡಿದ ಅಂಗಡಿ. ಅಲ್ಲಿಗೆ ಹೋದಾಗ ಅಲ್ಲಿ ಅದೇ ಬಂಗಾಳಿ ಮುದುಕ ಮತ್ತು ಅವನ ಸಂಗಾತಿ ಚೋಪ್ತಾಗೆ ಇಳಿದುಹೋಗಲು ತಯಾರಾಗುತ್ತಿದ್ದರು. ''ಇದ್ದಕ್ಕಿದ್ದಂತೆ ನನಗೆ ಆಮ್ಲಜನಕದ ಅಭಾವದಿಂದಾಗಿ ಉಸಿರಾಟದ ತೊಂದರೆಯಾಯಿತು. ನಾನು ಕೂಡಲೇ ಕೆಳಗಡೆ ಹೋಗಬೇಕು. ಇಲ್ಲದಿದ್ದರೆ ಉಳಿಯಲಾರೆ'' ಎಂದ. ಹಾಗಿದ್ದರೆ ಚಂದ್ರಶಿಲಾ? ''ನಾಳೆ ಬೆಳಗ್ಗೆ ೪ ಗಂಟೆಗೆ ಎದ್ದು ಅಲ್ಲಿಗೆ ಹೋಗಬೇಕೆಂದಿದ್ದೆ. ನಾನು ಅದಕ್ಕೋಸ್ಕರವೇ ಇಲ್ಲಿಗೆ ಬಂದಿದ್ದೆ. ಆದರೆ ಏನು ಮಾಡಲಿ? ಹೀಗಾಯಿತು, ವಿಧಿಯಿಲ್ಲ'' ಎಂದು ದುಃಖಿಸುತ್ತಾ ಅವರು ಹೊರಟರು. ಎಲ್ಲವೂ ಭಗವಂತನ ಇಚ್ಛೆ.



## ೩. ತುಂಗನಾಥ ದರ್ಶನ, ಶೃಂಗಾರ ಆರತಿ

ಸಾಯಂಕಾಲ ೭ ಗಂಟೆಗೆ ತುಂಗನಾಥನ ವಿಶೇಷ ದರ್ಶನ ಪಡೆಯುವ ಸಲುವಾಗಿ ಮಂದಿರದ ಕಡೆಗೆ ಹೊರಟೆವು. ಮಂದಿರದಲ್ಲಿ ಆಗಲೇ ಸುತ್ತಮುತ್ತಲ ಜನರು ಹಾಗೂ ಯಾತ್ರಿಕರು ನೆರೆದಿದ್ದರು. ನಾವು ಅಲ್ಲಿಗೆ ಹೋದಾಗ ನಮ್ಮ ಸಾಧುವೇಷವನ್ನು ನೋಡಿ ಜನರೆಲ್ಲ ದಾರಿ ಮಾಡಿಕೊಟ್ಟರು. ನಾವು ತುಂಗನಾಥ ಮಂದಿರದ ಗರ್ಭಗೃಹಕ್ಕೆ ಸಮೀಪವಾಗಿ ನಿಂತೆವು. ಉತ್ತರಾಖಂಡದಲ್ಲಿ ಎಲ್ಲೇ ಹೋದರೂ ಅಲ್ಲಿನ ಜನ ಸಾಧು, ಸಂನ್ಯಾಸಿಗಳಿಗೆ ವಿಶೇಷವಾಗಿ ಗೌರವ, ಭಕ್ತಿ ಸೂಚಿಸುತ್ತಾರೆ. ಅದು ಅವರ ರಕ್ತಗತವಾದ ಸಂಸ್ಕಾರ. ಸಹಸ್ರಾರು ವರ್ಷಗಳಿಂದ ಸಾಧು-ಸಂತರ ನೆಲೆವೀಡಾಗಿರುವ ಹಿಮಾಲಯದಲ್ಲಿ ಇದೊಂದು ವಿಶೇಷ. ಅಲ್ಲಿನ ಜನ ಸರಳರು, ಅನಕ್ಷರರು; ಆದರೆ ಆಚಾರವಂತರು. ಸಾಧುಗಳಿಗೆ ಎಷ್ಟು ಸಾಧ್ಯವೋ ಅಷ್ಟು ಆದರ, ಸತ್ಕಾರ ಮಾಡುತ್ತಾರೆ. ಕೇದಾರ, ಬದರಿಗಳಂಥ ಜನನಿಬಿಡ ಹಾಗೂ ಯಾತ್ರಿಕರಿಂದ ಗಿಜಿಗುಟ್ಟುವಂಥ ಸ್ಥಳದಲ್ಲಿ ಮಾತ್ರ ಜನ - ಉತ್ತರಾಖಂಡದವರೇ ಆದರೂ ಸರಿ - ತುಂಬ ವ್ಯಾವಹಾರಿಕರು. ತುಸು ವ್ಯಾಪಾರವೇನಾದರೂ ಆಗುವುದಿದ್ದರೆ ಮಾತ್ರ ಮಾತನಾಡುತ್ತಾರೆ. ಸಾಧ್ಯವಾದಷ್ಟು ದೋಚುತ್ತಾರೆ ಕೂಡ.

ತುಂಗನಾಥನ ವಿಗ್ರಹ ಚಿಕ್ಕದಾದರೂ ಅಪೂರ್ವ ಶೋಭೆಯಿಂದ ಕೂಡಿದ ಮೂರ್ತಿಯದು. ಹಿಂದೆ ಹೇಳಿದ ಪಂಚಕೇದಾರ ಕಥೆಯ ಪ್ರಕಾರ ಶಿವನ ಭುಜಗಳು ಬಿದ್ದು, ತುಂಗನಾಥವಾಯಿತಂತೆ. ಗರ್ಭಗುಡಿ ಹಾಗೂ ದೇಗುಲದ ವಿನ್ಯಾಸವನ್ನು ನೋಡಿದರೆ ಅದು ಅತ್ಯಂತ ಹಳೆಯ ಮಂದಿರವಿರಬೇಕು ಅನ್ನಿಸುತ್ತದೆ. ಅಂತೂ ತುಂಗನಾಥನ ದರ್ಶನವನ್ನು ಪಡೆದು ನಮ್ಮ ತನು, ಮನ, ಹೃದಯಗಳು ತುಂಬಿ ಬಂದವು. ಇಲ್ಲಿನ ಶೃಂಗಾರ ಆರತಿ ಮದ್ದಮಹೇಶ್ವರದಷ್ಟು ಸುಂದರವಾಗಿರಲಿಲ್ಲ. ಆದರೆ ಇಲ್ಲಿನ ಜನ ಆರತಿ ಹಾಡುತ್ತಾ ಶಿವನ ಸ್ತುತಿ ಮಾಡುವ ಬಗೆ ಮಾತ್ರ ನಮ್ಮ ಮನಮುಟ್ಟಿತು. ಅಸಾಧಾರಣ ಚಳಿಯಲ್ಲೂ ಭಕ್ತರು ಶಿವನ ಪ್ರಾರ್ಥನೆ ಮಾಡುತ್ತ ಆರಾಧಿಸುವ ರೀತಿಯನ್ನು ನೋಡಿದಾಗ ಮನಸ್ಸಿಗೆ ಅನ್ನಿಸುತ್ತದೆ, ಎಷ್ಟು ಕಷ್ಟಪಟ್ಟು



ಭಾರತದಲ್ಲಿ ಅತಿ ಎತ್ತರ ಪ್ರದೇಶದಲ್ಲಿರುವ ದೇಗುಲ.. ತುಂಗನಾಥ !

ಭಗವಂತನ ದರ್ಶನ, ಪ್ರಾರ್ಥನೆ ಮಾಡುತ್ತೇವೋ ಅವನ ಕೃಪೆ ಅಷ್ಟು ಸುಲಭವಾಗಿ ಹರಿದು ಬಂದೀತೇನೋ ಎಂದು. ಆದರೆ ಇವೆಲ್ಲ ನಮ್ಮ ಹೃದಯದ ಅರಕೆಯನ್ನು ಅವಲಂಬಿಸಿವೆ ಎಂದೂ ಒಮ್ಮೊಮ್ಮೆ ಅನಿಸುತ್ತದೆ.

ರಾತ್ರಿ ಊಟಕ್ಕೆ ಒಬ್ಬ ಹುಡುಗ ಮತ್ತು ಹೋಟೆಲಿನ ಹಿರಿಯವನು ಇಬ್ಬರೂ ಬಂದು ನಮ್ಮ ಲಾಡ್ಜಿನ ಸಮೀಪದಲ್ಲಿದ್ದ ಒಂದು ಅಡುಗೆ ಮನೆಯಲ್ಲಿ ಬಿಸಿ ಬಿಸಿ ನೂಡಲ್ಸ್ ತಯಾರಿಸಿ ಕೊಟ್ಟರು. ಅಲ್ಲಿ ಒಲೆ ಉರಿಸಲು ಅವರು ಪಟ್ಟಪಾಡು ನೋಡುವಂಥದ್ದೆ. ಹೊರಗೆ ಸಣ್ಣಗೆ ಜಿನಿಗು ಮಳೆ, ಮೈ ಹೆಪ್ಪುಗಟ್ಟಿಸುವ ಚಳಿ, ಹಿಮಕವಿದ ವಾತಾವರಣ ಬೇರೆ. ಆದರೂ ಅವರ ಪ್ರಯತ್ನದಿಂದ ಚೆನ್ನಾಗಿ ಬೆಂಕಿ ಉರಿದಾಗ, ನಾವೂ ಆ ಬೆಂಕಿಯ ಬಳಿ ಕುಳಿತು ಚಳಿ ಕಾಯಿಸಿಕೊಂಡೆವು. ಊಟ ತಯಾರಾಯಿತು; ಅಲ್ಲೇ ಬೆಂಕಿಯ ಬಿಸಿಗೆ ಕುಳಿತು ಬಿಸಿ ಬಿಸಿ ನೂಡಲ್ಸ್ ಸವಿದೆವು. ''ಮಧ್ಯಾಹ್ನ ನಮ್ಮ ಕಡೆಯಿಂದ ತಡವಾಯಿತು ಸ್ವಾಮಿ. ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ. ನಿಮ್ಮಂಥ ಸಾಧು ಮಂದಿಗಳ ಸೇವೆ ಮಾಡುವುದೇ ನಮ್ಮ ಭಾಗ್ಯ'' ಎಂದು ಅಡುಗೆಯ ಹುಡುಗ ತುಂಬಾ ವಿನಯದಿಂದ ನಮಗೆ ನಮಸ್ಕರಿಸಿದ. ನಾವು, 'ಪರವಾಗಿಲ್ಲ ಬಿಡು' ಎಂದು ಅವನ ಕೈಗೆ ಹಣಕೊಟ್ಟು ರೂಮಿಗೆ ಬಂದು, ಬೇಗನೆ ಮುಖ ತೊಳೆದು, ಹೊದ್ದು ಮಲಗಿಕೊಂಡೆವು. ಬೆಳಗ್ಗೆ ೪ ಕ್ಕೆ ಏಳುವಂತೆ ಅಲಾರಂ ಇಟ್ಟೆವು. ೪ ಗಂಟೆಗೆ ಚಂದ್ರಶಿಲೆಗೆ ಹೊರಡಬೇಕಲ್ಲ!

## ೪. ಚಂದ್ರಶಿಲಾ

ಅಂದುಕೊಂಡಂತೆ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು, ಮುಖ ತೊಳೆದು ಹೊರಟುನಿಂತಾಗ 'ಇಂಥ ಚಳಿಯಲ್ಲೂ ಪರ್ವತ ಹತ್ತುವುದೆ!' ಎಂದು ಅನ್ನಿಸದಿರಲಿಲ್ಲ. ಆದರೆ ಬೆಳಗಿನ ಹೊತ್ತು ವಾತಾವರಣ ಶಾಂತಗೊಡದ್ದರಿಂದ ಇರಬೇಕು, ಚಳಿ ಅಷ್ಟೊಂದು ಭೀಕರವೆನಿಸಲಿಲ್ಲ. ಬೇಗನೆ ಸ್ವೆಟರ್, ಶಾಲು ಇತ್ಯಾದಿಗಳನ್ನು ಹಾಕಿಕೊಂಡು ಕೋಣೆಯಿಂದ ಹೊರಬಂದೆವು. ಇಲ್ಲಿ ನಸುಕು, ಕತ್ತಲು ದಟ್ಟವಾಗಿಯೇ ಇತ್ತು. ಸ್ವಲ್ಪ ದೂರ ಹೋಗುವಷ್ಟರಲ್ಲಿ ನಿನ್ನೆ ನಾವು ಕಂಡ ಪ್ರಪಾತದ ಬದಿಯಲ್ಲಿಯೇ ನಮ್ಮ ದಾರಿ ಸಾಗುತ್ತಿದ್ದುದ್ದನ್ನು



ಚಂದ್ರಶಿಲಾ

ಗಮನಿಸಿದೆವು. ಟಾರ್ಚ್ ಹಾಕಿಕೊಂಡು ಹೋಗುವಾಗ ಒಂದೆಡೆ ಬೆಳಕು ಬೀರಿ ನೋಡಿದೆವು – ಒಂದು ಬಂಡೆಯ ಬದಿಯಲ್ಲೇ ನಮ್ಮ ದಾರಿ ಹೋಗುವಾಗ, ಇನ್ನೊಂದು ಬದಿಯಲ್ಲಿ ಏನೂ ಇಲ್ಲ– ಸಾವಿರಾರು ಮೀಟರ್ ಆಳದ ಕಂದಕ! ಉರುಳಿ ಬಿದ್ದರೆ ನೇರ ಪಾತಾಳಕ್ಕೆ. ಎಂಥ ಅಪಾಯದ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದೇವೆಂದು ಅನಂತರ ಯೋಚಿಸಿದಾಗ ನಮಗೆ ಅರಿವಾಯಿತು. ದಾರಿ ನಮ್ಮನ್ನು ಕೊಂಡೊಯ್ದತ್ತ ಮುಂದೆ ಸಾಗಿ ನಡೆಯುತ್ತಿದ್ದೆವು. ಮುಂದೆ ಕೆಲವು ಗಿಡಮರಗಳು, ಬುಗ್ಯಾಲ್, ಹುಲ್ಲು–ಪೊದೆಗಳು ಇವನ್ನು ದಾಟಿ, ಬರೀ ಬೋಳುಗುಡ್ಡದಲ್ಲೇ ನಡೆಯತೊಡಗಿದೆವು. ಸುಮಾರು ಒಂದೂವರೆ ಕಿಲೋಮೀಟರ್ ದೂರವಷ್ಟೇ – ಪರ್ವತದ ತುದಿಯನ್ನು ತಲುಪಿದಂತೆ ನಮಗೆ ಅನ್ನಿಸತೊಡಗಿತು. ದೂರ ಮೂಡಣ ದಿಕ್ಕಿನಲ್ಲಿ ಆಕಾಶ ಕೆಂಪಾಗಿತ್ತು. ಇನ್ನೂ ಉದಯಕ್ಕೆ ಸಮಯವಿದೆ. ಸುತ್ತಮುತ್ತ ಎಲ್ಲ ದಿಕ್ಕುಗಳಲ್ಲೂ ಪರ್ವತದ ಸಾಲುಗಳು ಕಾಣತೊಡಗಿದವು. ಬೆಳಗಿನ ಚಳಿ, ನಡೆಯುವ ಆಯಾಸ – ಇವುಗಳ ನಡುವೆಯೂ ಹೊಸ ಪ್ರದೇಶವನ್ನು ನೋಡುವ ಕುತೂಹಲ. ನಡೆದು ಬಂದ ಶ್ರಮದಲ್ಲಿ ಚಳಿ ಬಹುತೇಕ ಮಾಯವಾಗಿತ್ತು. ಕೊನೆಗೂ ಪರ್ವತಾಗ್ರವನ್ನು ಏರಿ ನಿಂತೆವು. ಇನ್ನು ಏರಲು ಏನೂ ಉಳಿದಿಲ್ಲ!

ಅದೇ ಚಂದ್ರಶಿಲಾ! ೪೦೦೦ ಮೀಟರ್ ಎತ್ತರ, ಸಮುದ್ರ ಮಟ್ಟದಿಂದ ಎಂದು ಒಂದೆಡೆ ಬರೆದಿದ್ದರು. ಸುತ್ತ ತಿರುಗಿ ನೋಡಿದರೆ, ೩೬೦ ಡಿಗ್ರಿ, ವರ್ತುಲವಾಗಿ ಎಲ್ಲ ದಿಕ್ಕುಗಳಲ್ಲೂ ಸುಂದರ ದೃಶ್ಯ ಕಾಣಿಸಿತು. ಇನ್ನೂ ಬೆಳಕಾಗಿಲ್ಲ ; ಆಗಲೇ ಕೆಲವು ಮಂದಿ ಜಪಾನೀ ಪ್ರವಾಸಿಗರು ಒಂದೊಂದು ಕಡೆ ಧ್ಯಾನಸ್ಥರಾಗಿ ಕುಳಿತಿದ್ದರು – ಬುದ್ಧನಂತೆ. ನಾವೂ ಒಂದೆಡೆ ಕುಳಿತು ಸೂರ್ಯೋದಯವಾಗುವುದನ್ನು ನಿರೀಕ್ಷಿಸತೊಡಗಿದೆವು.

ನಮ್ಮ ಎಡಭಾಗದಿಂದ ನೋಡಿದಾಗ ಪಶ್ಚಿಮದ ದೂರ ದಿಗಂತದಲ್ಲಿ ನಿಧಾನವಾಗಿ ಆರಂಭವಾಗುವ ಪರ್ವತದ ಸಾಲುಗಳು ಕೇದಾರ ಪರ್ವತ, ಚೌಖಂಬಾ, ನಂದಾದೇವಿ, ಪಂಚಚುಲಿ ಮೊದಲಾದ ಸಾಲುಗಳ ಮೂಲಕ ಪೂರ್ವದಲ್ಲಿ ನೇಪಾಳದ ಬೆಟ್ಟದ ಸಾಲುಗಳವರೆಗೂ ಮುಂದುವರಿಯುತ್ತದೆ. ಅಲ್ಲಿಂದ ಪರ್ವತಶಿಖರಗಳೆಲ್ಲವನ್ನೂ ಗುರುತಿಸಬಹುದಂತೆ. ನಮಗೆ ಪರ್ವತಗಳನ್ನು ಕುರಿತ ತಿಳುವಳಿಕೆ ಅಷ್ಟೊಂದು ಇಲ್ಲದ್ದಕ್ಕೆ ಖೇದವೆನಿಸಿತು. ತುಂಬ ತಯಾರಾಗಿ ಬರಬೇಕಿತ್ತು ಅನ್ನಿಸಿತು. ಆದರೂ ಪರವಾಗಿಲ್ಲ , ನಿಸರ್ಗದ ಅದ್ಭುತ ದೃಶ್ಯಗಳನ್ನು ಸವಿದು ಆನಂದಿಸಲು ಅದೆಂಥ ಹೆಚ್ಚಿನ ಜ್ಞಾನದ ಅಗತ್ಯವಿದೆ?

ಇದ್ದಕ್ಕಿದ್ದಂತೆ ಪಶ್ಚಿಮದ ತುದಿಗಿದ್ದ ಕೇದಾರ ಬೆಟ್ಟದ ಸಾಲುಗಳು ಹೊಂಬಣ್ಣದಿಂದ ಕಂಗೊಳಿಸಲಾರಂಭಿಸಿದ್ದನ್ನು ನಾವು ಗುರುತಿಸಿದೆವು. ಸೂರ್ಯನ ಮೊದಲ ಕಿರಣಗಳು ಬಿದ್ದ ಬೆಟ್ಟಗಳು ಪಶ್ಚಿಮದ ಕಡೆಯವು; ಕ್ರಮೇಣ ಉನ್ನತ ಶ್ರೇಣಿಗಳೆಲ್ಲ ಉದಯಸೂರ್ಯನ ಅದ್ಭುತ ಕೈಚಳಕದಿಂದ ಹೇಮವರ್ಣವನ್ನು ತಳೆದು ನಿಲ್ಲಲಾರಂಭಿಸಿದವು. ಬರಬರುತ್ತ ಎಲ್ಲ ಹಿಮಾಚ್ಛಾದಿತ ಶಿಖರಗಳೂ ಹೊಂಬಣ್ಣದಿಂದ ಬೆಳಗುತ್ತ, ಕ್ಷಣಕ್ಷಣಕ್ಕೂ ಅವುಗಳ ಪ್ರಭೆ ದೀಪ್ತವಾಗುತ್ತ, ನಮ್ಮ ಸುತ್ತಣ ಜಗತ್ತೇ ಒಂದು ಅದ್ಭುತ ರಂಗಭೂಮಿಯಂತೆ ಅನ್ನಿಸತೊಡಗಿತು.

